## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಗೃಹ ಸಚಿವರ ಉತ್ತರ

**ಪ್ರಶ್ನೆ:**

ಅತ್ತಿಬೆಲೆ ಬಳಿ ಪಟಾಕಿ ಗೋದಾಮು ಸ್ಫೋಟಗೊಂಡು 13 ಕ್ಕೂ ಹೆಚ್ಚು ಕಾರ್ಮಿಕರು ಮೃತಪಟ್ಟಿದ್ದು, ಅಲ್ಲದೆ ಕುಂಬಳಗೋಡು ಬಳಿಯ ರಾಮಸಂದ್ರ ಗ್ರಾಮದಲ್ಲಿರುವ ಸುಗಂಧದ್ರವ್ಯ ತಯಾರಿಸುವ ಕಾರ್ಖಾನೆಯಲ್ಲಿ ಅಗ್ನಿ ಅವಘಡದಿಂದ 3 ಜನಕಾರ್ಮಿಕರು ಸಜೀವದಹನ ಆಗಿದ್ದು, ಐವರು ಗಂಭೀರಗಾಯಗೊಂಡಿರುವ ಬಗ್ಗೆ ಸಂಯುಕ್ತ ಕರ್ನಾಟಕ ಪತ್ರಿಕೆ ಹಾಗೂ ಇತರೆ ಮಾಧ್ಯಮಗಳಲ್ಲಿ ವರದಿಯಾಗಿದೆ.

ಈತರದ ಅಗ್ನಿ ಅವಘಡಗಳ ಬಗ್ಗೆ ಆಗಾಗ ವರದಿಯಾಗುತ್ತಲೆ ಇದೆ. ಇದಕ್ಕೆಕಾರಣ ಅಸುರಕ್ಷಿತ ಗೋದಾಮುಗಳ ನಿರ್ಮಾಣ ಹಾಗೂ ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಈ ಬಗ್ಗೆ ಮಾಧ್ಯಮಗಳಲ್ಲೂ ವರದಿಯಾಗಿದೆ.

ಸರ್ಕಾರ ಈ ಬಗ್ಗೆ ಗಮನ ಹರಿಸಿ ಪರಿಹಾರ ಸೂಚಿಸದೆ ಇದ್ದಲ್ಲಿ ಇನ್ನೂ ಈ ದುರಂತಗಳು ನಡೆಯುದರ ಜೊತೆಗೆ ಅಮಾಯಕ ಕಾರ್ಮಿಕರ ಜೀವ ಸಹ ಹೊಗುತ್ತಿರುತ್ತದೆ. ಆದ್ದರಿಂದ ಸರ್ಕಾರ ಈ ಕೂಡಲೇ ಸುರಕ್ಷಿತ ಗೋದಾಮು ನಿರ್ಮಾಣ ಮತ್ತು ಕೈಗೊಳ್ಳಬೇಕಾದ ಜಾಗ್ರತೆಯ ಬಗ್ಗೆ ಒಂದು ಸೂಕ್ತ ಕಾನೂನು ರೂಪಿಸಿ ಅದನ್ನು ಜಾರಿಗೆತರಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಉತ್ತರ:**

**<u>ಅ) ಅತ್ತಿಬೆಲೆ ಬಳಿ ಪಟಾಕಿ ಗೋದಾಮು ಸ್ಫೋಟಗೊಂಡಗೊಂಡ ದುರಂತದ ಬಗ್ಗೆ ವಿವರ:</u>**

ದಿನಾಂಕ: 07-10-2023 ರಂದು ಮೆ: ಬಾಲಾಜಿ ಟ್ರೇಡರ್ಸ್ ಸರ್ವೆ ನಂ.45/1 ಎನ್. ಹೆಚ್.07, ಅತ್ತಿಬೆಲೆ ಟೋಲ್, ಅತ್ತಿಬೆಲೆ ಹೋಬಳಿ, ಹೊಸೂರು ರಸ್ತೆ, ಬೆಂಗಳೂರು ಇಲ್ಲಿ ಅಂದಾಜು 150X40 ಚ.ಅಡಿ ಅಳತೆಯ ಜಿಂಕ್ ಶೀಟಿನಿಂದ ನಿರ್ಮಿಸಿರುವ ಕಟ್ಟಡದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಸ್ಲೈಡಿಂಗ್ ಷಟರ್ ಬಾಗಿಲುಗಳು 40 ಅಡಿಗಳಿಗೂ ತೆರದಿರುತ್ತದೆ. ಮುಂಭಾಗದಲ್ಲಿ ಒಂದು ಕಂಟೈನರ್ ಮತ್ತು ಎರಡು ಟೆಂಪೋಗಳು ಹಾಗೂ ಎಂಟು ದ್ವಿಚಕ್ರ ವಾಹನಗಳು ಸೇರಿದಂತೆ ಈ ಕಟ್ಟಡದಲ್ಲಿ ಎಲ್ಲಾ ರೀತಿಯ ಪಟಾಕಿಗಳನ್ನು ಶೇಖರಿಸಿರುವ ಗೋದಾಮಿಗೆ ಬೆಂಕಿಯಾಗಿರುತ್ತದೆ. ಕರೆ ಸ್ವೀಕರಿಸಿದ ಕೂಡಲೇ ಸ್ಥಳಕ್ಕೆ ಧಾವಿಸಿ ಅಗ್ನಿ ನಂದಿಸುವ ಕಾರ್ಯ ನಿರ್ವಹಿಸಲಾಗಿರುತ್ತದೆ.

ಈ ಘಟನೆ ಸಂಭವಿಸಿದ ನಂತರ ರಾಜ್ಯದಲ್ಲಿರುವ ಎಲ್ಲಾ ಪಟಾಕಿ ಮಳಿಗೆಗಳು, ಗೋಡೌನ್ ಮತ್ತು ಪಟಾಕಿ ತಯಾರಿಕಾ ಕಾರ್ಖಾನೆಗಳನ್ನು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಪರಿಶೀಲನೆ ನಡೆಸಿ, ಅನಧಿಕೃತ ಮಳಿಗೆ, ಗೋಡೌನ್ ಮತ್ತು ಕಾರ್ಖಾನೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 1781 ಎಫ್‌ಸಿಸಿ 81, ದಿನಾಂಕ: 23-09-1981ರ ಸೂಚನೆಗಳನ್ವಯ ಪ್ರತಿ ವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಅಗ್ನಿಶಾಮಕ ಠಾಣೆಗಳಿಗೆ ಸುತ್ತೋಲೆಗಳನ್ನು ಹೊರಡಿಸಿ ಜಿಲ್ಲಾ ದಂಡಾಧಿಕಾರಿ / ಪೊಲೀಸ್ ಆಯುಕ್ತ ರವರ ಸೂಚನೆಯಂತೆ ಸ್ಥಳೀಯ ಪಟಾಕಿ ಮಾರಾಟ ಮಳಿಗೆಗಳಿಗೆ ಸ್ಥಳ ನಿರೀಕ್ಷಣೆ ಮಾಡಿ ಅಗ್ನಿಶಮನ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸುವ ಕುರಿತು ಅಗ್ನಿಶಾಮಕ ಇಲಾಖೆಯ ಸ್ಥಳೀಯ ಅಧಿಕಾರಿಗಳಿಂದ ನಿರೀಕ್ಷಣಾ ವರದಿಗಳನ್ನು ಸಲ್ಲಿಸಲಾಗುತ್ತದೆ. ಸದರಿ ವರದಿಗಳನ್ವಯ ಪಟಾಕಿ ಮಳಿಗೆಗಳನ್ನು ನಿರ್ಮಿಸಲು ಸಂಬಂಧಿಸಿದ ಪ್ರಾಧಿಕಾರಗಳು ನಿರಾಕ್ಷೇಪಣಾ ಪತ್ರಗಳನ್ನು ಮಾರಾಟಗಾರರಿಗೆ ಒದಗಿಸುತ್ತವೆ.

ಚಿಲ್ಲರೆ ಪಟಾಕಿಗಳ ತಾತ್ಕಾಲಿಕ ದಾಸ್ತಾನು ಹಾಗೂ ಮಾರಾಟ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ದಾಸ್ತಾನು ಹಾಗೂ ಸಗಟು ಮಾರಾಟಗಳೂ ಸೇರಿದಂತೆ ವಿವಿಧ ಆವರಣಗಳಿಗೆ ಸಂಬಂಧಿಸಿದಂತೆ

Mysore Fire Force Act, 1964ರಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ನೀಡಲು ಇಲಾಖೆಯು ಕಾಲಕಾಲಕ್ಕೆ ಸ್ಥಾಯಿ ಆದೇಶಗಳನ್ನು (ಜಾರಿಯಲ್ಲಿರುವ ಸ್ಥಾಯಿ ಆದೇಶ ಸಂಖ್ಯೆ 151ರ ಜಿಬಿಸಿ(1) 413/2011, ದಿನಾಂಕ: 25-07-2015) ಹೊರಡಿಸಿ ಅದರನ್ವಯ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಂಭವನೀಯ ಅಗ್ನಿಅನಾಹುತಗಳನ್ನು ತಪ್ಪಿಸಲು ಇಲಾಖಾ ಅಧಿಕಾರಿಗಳು ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಪ್ರತಿ ವರ್ಷವೂ ಸುತ್ತೋಲೆಗಳನ್ನು ಹೊರಡಿಸಿ ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪತ್ರಿಕಾ ಪ್ರಕಟಣೆಯನ್ನು ಸಹಾ ಹೊರಡಿಸಲಾಗುತ್ತಿರುತ್ತದೆ.

ಅತ್ತಿಬೆಲೆ ಪಟಾಕಿ ದುರಂತದ ಬಳಿಕ ಸಾರ್ವಜನಿಕರ ಆಸ್ತಿ-ಪಾಸ್ತಿ ಸಂರಕ್ಷಣೆ ಮತ್ತು ಪ್ರಾಣ ರಕ್ಷಣೆ ಮಾಡುವ ದೃಷ್ಟಿಯಿಂದ ಅಗ್ನಿಶಾಮಕ ಇಲಾಖೆಯ ಆದೇಶ ಸಂ: ಜಿಬಿಸಿ(3)139: 2023, ದಿನಾಂಕ: 01-02-2024ರಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಮಾರ್ಗಸೂಚಿಗಳನ್ನು (SOP-Standard Operating Procedure) ರಚಿಸಲಾಗಿರುತ್ತದೆ:

1) Retail Sale of Crackers
2) Crackers Godown
3) Crackers Manufacture

ಮೇಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಅಗ್ನಿಶಾಮಕ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಸಾರ್ವಜನಿಕರ ತಿಳುವಳಿಕೆಗಾಗಿ ಅಗ್ನಿಶಾಮಕ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಣೆಗೊಳಿಸಲಾಗಿರುತ್ತದೆ.

**<u>ಆ) ಕುಂಬಳಗೋಡು ಬಳಿಯ ರಾಮಸಂದ್ರ ಗ್ರಾಮದಲ್ಲಿ ಸುಗಂಧದ್ರವ್ಯ ತಯಾರಿಸುವ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದ ಬಗ್ಗೆ ವಿವರ:</u>**

ದಿನಾಂಕ: 18-02-2024 ರಂದು ರಾಮಸಂದ್ರ ಬಸ್ ನಿಲ್ದಾಣ, ಕೆಂಗೇರಿ ಹೋಬಳಿ, ಕುಂಬಳಗೋಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಂದಾಜು 33X27 ಚ.ಅಡಿ ವಿಸ್ತೀರ್ಣದಲ್ಲಿನ ನಿವೇಶನದಲ್ಲಿ ಅಂದಾಜು 12X27 ಚ.ಅಡಿ ವಿಸ್ತೀರ್ಣದಲ್ಲಿ ಆಸ್ಬರ್ ಶೀಟ್ ನಿಂದ ನಿರ್ಮಿಸಲಾಗಿರುವ ಪರ್ಫ್ಯೂಮ್ ಬಾಟಲ್ ಶೇಖರಣಾ ಗುಜರಿಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 03 ಜನ ಮೃತರಾಗಿದ್ದು, 06 ಜನ ಗಾಯಗೊಂಡಿರುತ್ತಾರೆ. ಗಾಯಾಳುಗಳು ಬೆಂಗಳೂರು ನಗರದ ವಿಕ್ಟೋರಿಯಾ ಆಸ್ಪತ್ರೆ ಹಾಗೂ ಗೌರಿಪಾಳ್ಯದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ಆದರೆ ಈ ಕಾರ್ಖಾನೆಗೆ ಅಗ್ನಿಶಾಮಕ ಇಲಾಖೆಯಿಂದ ಯಾವುದೇ ನಿರಾಕ್ಷೇಪಣಾ ಪತ್ರ ಒದಗಿಸಿರುವುದಿಲ್ಲ. ಆದಾಗ್ಯೂ ಮೃತಪಟ್ಟವರಿಗೆ ತಲಾ ರೂ. 5.00 ಲಕ್ಷ ಮತ್ತು ಗಾಯಗೊಂಡಿರುವವರಿಗೆ ತಲಾ ರೂ. 1.00 ಲಕ್ಷವನ್ನು ಪರಿಹಾರವನ್ನು ಘೋಷಿಸಲಾಗಿರುತ್ತದೆ.

**ಸಂಖ್ಯೆ: HD 43 SFB 2024**

**(ಡಾ.ಜಿ ಪರಮೇಶ್ವರ)**
**ಗೃಹ ಸಚಿವರು**